# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ
# ಚನ್ನರಾಯಪಟ್ಟಣ

-:: ಉಪಸ್ಥಿತರು ::-

ಶ್ರೀ ವೆಂಕಣ್ಣ ಬಸಪ್ಪ ಹೊಸಮನಿ,
ಬಿ.ಕಾಂ., ಎಲ್.ಎಲ್.ಬಿ. (ಸ್ಪೆಷಲ್)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

**ಆದೇಶದ ದಿನಾಂಕಃ 14ನೇ ಆಗಸ್ಟ್ 2014**

## ಖಾಸಗಿ ದೂರು ಸಂಖ್ಯೆ 80/2007

ಪಿರ್‍ಯಾದುದಾರರು : ಸರಸ್ವತಿ ಕೋಂ ರಂಗಸ್ವಾಮಿ, 26 ವರ್ಷ,
ನಲ್ಲೂರು ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

(ಪಿರ್ಯಾದುದಾರರ ಪರ ಶ್ರೀ ಕೆ.ಜೆ.ಧರ್ಮಪ್ಪ, ವಕೀಲರು)

**-Vs-**

ಆರೋಪಿತರು :

1. ರಂಗಸ್ವಾಮಿ ಬಿನ್ ಹೊನ್ನೇಗೌಡ, 85 ವರ್ಷ,
2. ಹೊನ್ನೇಗೌಡ, 61 ವರ್ಷ,
3. ನಾಗಮ್ಮ ಬಿನ್ ಹೊನ್ನೇಗೌಡ ಕೋಂ ಕುಮಾರಗೌಡ, 35 ವರ್ಷ,
4. ಎಸ್.ಎನ್ ರಾಜೇಗೌಡ ಬಿನ್ ದ್ಯಾವೇಗೌಡ, 70 ವರ್ಷ,
5. ನಾಗೇಂದ್ರ ಬಿನ್ ಪಾಪೇಗೌಡ, 35 ವರ್ಷ,
6. ಪುಟ್ಟರಾಜು ಬಿನ್ ಕರಿಗೌಡ, 50 ವರ್ಷ,
7. ಸತೀಶ್ ಬಿನ್ ತಿಮ್ಮೇಗೌಡ, 30 ವರ್ಷ,
8. ಶಿವರಾಜ ಬಿನ್ ನಂಜಪ್ಪ, 30 ವರ್ಷ,
9. ಮಂಜು ಬಿನ್ ಹೊನ್ನೇಗೌಡ, 45 ವರ್ಷ,
10. ಸಾಕಮ್ಮ ಉಃ ಸಾಕಿ ಕೋಂ ಮಂಜು, 38 ವರ್ಷ,
11. ನಂಜುಂಡೇಗೌಡ ಬಿನ್ ಹೊನ್ನೇಗೌಡ, 35 ವರ್ಷ,
12. ಸಾವಿತ್ರಿ ಕೋಂ ನಂಜುಂಡೇಗೌಡ, 30 ವರ್ಷ,
13. ಕೃಷ್ಣ ಬಿನ್ ಹೊನ್ನೇಗೌಡ, 25 ವರ್ಷ,

14. ಕುಮಾರ ಬಿನ್ ಜವರೇಗೌಡ, 40 ವರ್ಷ,
15. ಮೀನಾಕ್ಷಿ ಕೋಂ ನರಸಿಂಹ, 46 ವರ್ಷ,
16. ಕರಿಯಮ್ಮ ಬಿನ್ ಲಕ್ಕೇಗೌಡ, 55 ವರ್ಷ,
17. ಜಗ ಬಿನ್ ಕುಳ್ಳೇಗೌಡ, 35 ವರ್ಷ,

3 ಮತ್ತು 4 ರವರ ವಿಳಾಸಃ ಬೆಟ್ಟದಕೊಪ್ಪಲು ಗ್ರಾಮ,
ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

1, 2 ಮತ್ತು 5 ರಿಂದ 13 ಮತ್ತು 15 ರಿಂದ 17 ರವರ ವಿಳಾಸಃ
ದಬ್ಬೆಘಟ್ಟ ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

18. ಚಂದ್ರಕಲಾ ಬಿನ್ ನಂಜಪ್ಪ, 32 ವರ್ಷ,
19. ನಂಜಪ್ಪ ಬಿನ್ ಶಿವಪ್ಪ, 60 ವರ್ಷ,
20. ವಸಂತಮ್ಮ ಕೋಂ ನಂಜಪ್ಪ, 55 ವರ್ಷ,

18 ರಿಂದ 20 ರವರ ವಿಳಾಸಃ
ನಾರಾಯಣಪುರ ಗ್ರಾಮ, ಸಂತೇಬಾಚಹಳ್ಳಿ ಹೋಬಳಿ,
ಕೆ.ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

## -ಃಃ ಆದೇಶ ಃಃ-

ಪಿರ್ಯಾದುದಾರಳು ಈ ಪಿರ್ಯಾದನ್ನು ದಿನಾಂಕಃ 10-05-2007 ರಂದು ತೆರೆದ ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರ ಅಡಿ ಖಾಸಗಿ ದೂರನ್ನು ಸಲ್ಲಿಸಿ, ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ 494 ರ ರೀತ್ಯಾ ಅಪರಾಧ ಎಸತದ್ದಾರೆಂದು ಅವರ ವಿರುದ್ಧ ಸೂಕ್ತ ಕಾನೂನು ಕ್ರಮಜರುಗಿಸಿ ಶಿಕ್ಷೆ ವಿಧಿಸಬೇಕೆಂದು ಕೋರಿ ಕೊಂಡಿದ್ದಾಳೆ.

ಮುಂದುವರಿದಿದೆ......

2. **ಪಿರ್ಯಾದಿಯ ಸಂಕ್ಷೀಪ್ತ ವಿವರಣೆ ಈ ಕೆಳಕಂಡಂತಿದೆ.**

ಪಿರ್‍ಯಾದಿದಾರಳನ್ನು 1ನೇ ಆರೋಪಿತನು ಸುಮಾರು 10 ವರ್ಷಗಳ ಹಿಂದೆ ಪಿರ್‍ಯಾದಿದಾರಳ ತವರೂರಾದ ನಲ್ಲೂರು ಗ್ರಾಮದಲ್ಲಿ ತಮ್ಮ ಕುಲಪದ್ಧತಿಯಂತೆ ಹಾಗೂ ಹಿಂದೂ ಸಂಪ್ರದಾಯದಂತೆ ವಿವಾಹ ಮಾಡಿಕೊಂಡಿದ್ದಾನೆ. ಪಿರ್‍ಯಾದಿದಾರಳು 1ನೇ ಆರೋಪಿತನನ್ನು ಕಾನೂನುಬದ್ಧ ಧರ್ಮಜ ಪತ್ನಿಯಾಗಿದ್ದಾಳೆ. ಪಿರ್‍ಯಾದಿದಾರಳನ್ನು 1ನೇ ಆರೋಪಿತನು ವಿವಾಹವಾದ ನಂತರ ನಲ್ಲೂರು ಗ್ರಾಮದಲ್ಲಿಯೂ ಹಾಗೂ 1ನೇ ಆರೋಪಿತನ ಊರಾದ ದಬ್ಬೇಘಟ್ಟ ಗ್ರಾಮದಲ್ಲಿ ನಮ್ರತೆಯಿಂದ ವೈವಾಹಿಕ ದಾಂಪತ್ಯ ಜೀವನವನ್ನು ನಡೆಸಿಕೊಂಡು ಈ ಸಂಬಂಧ ಅವರಿಗೆ ಒಂದು ಹೆಣ್ಣು ಮಗು ಮತ್ತು ಮಗ ಜನಿಸಿದ್ದಾರೆ. 1ನೇ ಆರೋಪಿತನು ಪಿರ್‍ಯಾದಿದಾರಳನ್ನು ವಿವಾಹವಾದ ಕಾಲದಿಂದಲೂ ಪ್ರತಿದಿನವೂ ಮದ್ಯಪಾನ ಮಾಡಿಕೊಂಡು ಬಂದು ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ಕಿರುಕುಳ ನೀಡುವುದು, ಜೂಜಾಡುವುದು ಹಾಗೂ ಪರ ಹೆಂಗಸರ ಸಹವಾಸ ಮಾಡುತ್ತಾ, ಅವರ ಕುಟುಂಬಕ್ಕೆ ಬರುತ್ತಿದ್ದ ಆದಾಯವನ್ನು ವ್ಯಯ ಮಾಡುತ್ತಾ ಬಂದು ಪಿರ್‍ಯಾದಿದಾರಳಿಗೆ ಹೆಚ್ಚಿನ ವರದಕ್ಷಿಣೆಯನ್ನು ತರುವಂತೆ ಕಿರುಕುಳ ನೀಡಿ ಮನೆಯಿಂದ ಹೊರ ಹಾಕಿದ್ದಾನೆ. ಪಿರ್‍ಯಾದಿದಾರಳು ತನ್ನ ತವರು ಮನೆಯಲ್ಲಿ ವಾಸವಾಗಿದ್ದಾಳೆ ಮತ್ತು 1ನೇ ಆರೋಪಿ ವಿರುದ್ದ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಾಳೆ. ದಿನಾಂಕ 07-08-2006 ರ ಸೋಮವಾರ 9.30 ರಿಂದ 10.50 ರೊಳಗೆ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ, ಶ್ರೀ. ಆದಿಚುಂಚನಗಿರಿ ಬೆಟ್ಟದಲ್ಲಿ 1ನೇ ಆರೋಪಿ 19 ನೇ ಆರೋಪಿ ಚಂದ್ರಕಲಾಳೊಂದಿಗೆ 2ನೇ ವಿವಾಹ ಮಾಡಿಕೊಂಡಿರುತ್ತಾನೆ. ಉಳಿದೆಲ್ಲಾ ಆರೋಪಿತರು ಕುಮ್ಮಕ್ಕು ನೀಡಿ ಸದರಿ ವಿವಾಹಕ್ಕೆ ಸಹಕರಿಸಿದ್ದಾರೆ. 1ನೇ ಮತ್ತು 19 ನೇ ಆರೋಪಿ ಚಂದ್ರಕಲಾಳನ್ನು ವಿವಾಹವಾಗಿರುವುದು ಕಾನೂನು ಬಾಹಿರವಾಗಿರುತ್ತದೆ.

ಮುಂದುವರಿದಿದೆ......

3. ಈ ವಿವಾಹವನ್ನು ನಲ್ಲೂರು ಗ್ರಾಮದ ರಾಮೇಗೌಡರ ಮಗ ಮೂರ್ತಿ ಮತ್ತು ತಿರುಮಲೇಗೌಡರ ಮಗ ಮಹೇಶ ಇವರುಗಳು ನೋಡಿದ್ದು, ಸದರಿ ಆದಿಚುಂಚನಗಿರಿ ಬೆಟ್ಟದಲ್ಲಿ ಗಂಗಾಧರೇಶ್ವರ ದೇವಸ್ಥಾನ ಬೆಟ್ಟಕ್ಕೆ ಹೋದಾಗ ನೋಡಿದ್ದಾರೆ. ಅವರು ಸದರಿ ವಿವಾಹವಾಗುತ್ತಿರುವುದನ್ನು ನೋಡಿ ಹಾಗೂ ಆರೋಪಿತರೆಲ್ಲರುಗಳನ್ನು ನೋಡಿ ಆಶ್ಚರ್ಯಗೊಂಡು ನಮ್ಮೂರಿನ ಹುಡುಗಿ ಸರಸ್ವತಿಯನ್ನು ಮೊದಲೇ ವಿವಾಹ ಮಾಡಿಕೊಂಡಿದ್ದು, ಅವರಿಗೆ 2 ಜನ ಮಕ್ಕಳಿದ್ದರೂ ಸಹ ಈ ರೀತಿ ವಿವಾಹ ಮಾಡುತ್ತಿದ್ದೀರೆಂದು ಕೇಳಿದ್ದಕ್ಕೆ ಆರೋಪಿತರೆಲ್ಲರೂ ಸದರಿ ಮೂರ್ತಿ ಮತ್ತು ಮಹೇಶ್‌ರವರನ್ನು ಅವಾಚ್ಯ ಶಬ್ದಗಳಿಂದ ಬೈದು ನಮಗಿಷ್ಟ ಬಂದಂತೆ ಮದುವೆ ಮಾಡಿಕೊಳ್ಳುತ್ತೇವೆ. ನೀವ್ಯಾರು ಕೇಳಲು? ಎಂದು ಬೈದು ಕಳುಹಿಸಿರುತ್ತಾರೆ. 1ನೇ ಆರೋಪಿಯಾದ ರಂಗಸ್ವಾಮಿಯು 19ನೇ ಆರೋಪಿತಳಾದ ಚಂದ್ರಕಲಾಳನ್ನು ಮದುವೆಯಾಗಿರುವುದನ್ನು ನಾವು ಪ್ರತ್ಯಕ್ಷವಾಗಿ ನೋಡಿರುತ್ತಾರೆ.

4. 1ನೇ ಆರೋಪಿತನು 19ನೇ ಆರೋಪಿತಳಾದ ಚಂದ್ರಕಲಾಳನ್ನು 2ನೇ ವಿವಾಹವಾಗುವಾಗ ಜ್ಯೋಯಿಸರೊಬ್ಬರು ಗುಂಡು ಮತ್ತು ಹೆಣ್ಣಿನ ಮಧ್ಯೆ ಬಿಳಿ ಬಟ್ಟೆಯಿಂದ ತೆರೆಯನ್ನು ಕಟ್ಟಿ ನಿಲ್ಲಿಸಿದ್ದರು. ಅಲ್ಲಿಯೇ ದೇವಸ್ಥಾನದ ಪೂಜಾರಿಯು ಒಂದು ತಟ್ಟೆಯಲ್ಲಿ ಬೆಲ್ಲದ ಅಚ್ಚುಗಳನ್ನು, ತೆಂಗಿನ ಕಾಯಿ, ಅಕ್ಕಿ, ವೀಳ್ಯದೆಲೆ ಮತ್ತು ಬಾಳೆ ಹಣ್ಣನ್ನು ಇಟ್ಟು ಅದರ ಮೇಲೊಂದು ತಾಳಿ ಇಟ್ಟು ಪೂಜೆ ಮಾಡಿ ವಾಪಸ್ ಜ್ಯೋಯಿಸರ ಕೈನಲ್ಲಿ ಕೊಟ್ಟರು. ಅಲ್ಲಿಯೇ ಇದ್ದ ಎಲ್ಲಾ ಆರೋಪಿಗಳು ಸದರಿ ತಾಳಿಯನ್ನು ಮುಟ್ಟಿ ಆಶೀರ್ವಾದ ಮಾಡಿ ನಮಸ್ಕಾರವನ್ನು ಮಾಡಿರುತ್ತಾರೆ. ಆನಂತರ ಜ್ಯೋಯಿಸರು ಮಂತ್ರವನ್ನು ಪಠಿಸುತ್ತಾ ತೆರೆಯನ್ನು ತೆಗೆಸಿ 1ನೇ ಆರೋಪಿಯಿಂದ 19ನೇ ಆರೋಪಿಗೆ ಹೂಮಾಲೆಯನ್ನು

ಮುಂದುವರಿದಿದೆ……

ಹಾಕಿಸಿರುತ್ತಾರೆ. ಜ್ಯೋಯಿಸರು 1ನೆ ಆರೋಪಿತನಿಗೆ, 19ನೇ ಆರೋಪಿತಳಿಗೆ ತೆಂಗಿನ ಕಾಯಿ, ವೀಳ್ಯದೆಲೆ, ಬಾಳೆ ಹಣ್ಣುಗಳನ್ನು ಇಟ್ಟು ಉಳಿದೆಲ್ಲಾ ಆರೋಪಿಗಳಿಂದ ತೆಂಗಿನ ಕಾಯಿಯ ಮೇಲೆ ಹಾಲು ತುಪ್ಪ ಬಿಟ್ಟು ಧಾರೆ ಎರೆದಿರುತ್ತಾರೆ. ಬೆಳಿಗ್ಗೆ 9.30 ಗಂಟೆಯಿಂದ 10.30 ರ ಸಮಯದಲ್ಲಿ ಧಾರೆಯನ್ನು ಎರೆದು, 1ನೇ ಆರೋಪಿತನು 19ನೇ ಆರೋಪಿತಳಿಗೆ ಜ್ಯೋಯಿಸರು ಜೋರಾಗಿ ಮಂತ್ರ ಹೇಳಿ ತಾಳಿಯನ್ನು ಕಟ್ಟಿಸಿರುತ್ತಾರೆ. ಆಗ 1ನೇ ಆರೋಪಿತನು 19ನೇ ಆರೋಪಿತಳನ್ನು 2ನೇ ಹೆಂಡತಿಯಾಗಿ ತಾಳಿ ಕಟ್ಟಿರುವುದನ್ನು ಮೂರ್ತಿ ಮತ್ತು ಮಹೇಶ ಖುದ್ದಾಗಿ ನೋಡಿದ್ದು, ಪ್ರತಿಭಟಿಸಿ ಕೇಳಿದ್ದಕ್ಕೆ ಎಲ್ಲಾ ಆರೋಪಿಗಳು ನೀವು ಅಪ್ಪಿ ತಪ್ಪಿ ದೇವಸ್ಥಾನದ ಪೂಜೆಗೆ ಬಂದಿದ್ದೀರಿ. ಸುಮ್ಮನೆ ನೀವು ಪೂಜೆ ಮಾಡಿಸಿಕೊಂಡು ಬಂದ ದಾರಿಯಲ್ಲಿ ನೇರವಾಗಿ ಹೋಗಿ. ಇಲ್ಲವಾದರೆ ನಿಮ್ಮನ್ನು ಈ ಬೆಟ್ಟದಿಂದ ಕೆಳಗ ಎಸೆದು ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆಂಬ ವಿಚಾರವನ್ನು ನಮಗೆ ತಿಳಿಸಿರುತ್ತಾರೆ. ಕಾರಣ ಆರೋಪಿತರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಪಿರ್ಯಾದಿದಾರಳು ಈ ಖಾಸಗಿ ದೂರನ್ನು ಸಲ್ಲಿಸಿದ್ದಾಳೆ.

5. ಪಿರ್ಯಾದುದಾರಳು ತನ್ನ ಪ್ರಮಾಣೀಕೃತ ಹೇಳಿಕೆಯನ್ನು ಪಿ.ಡಬ್ಲ್ಯೂ-1 ಎಂದು, ಆಕೆಯ ಸಾಕ್ಷಿದಾರರ ಪ್ರಮಾಣೀಕೃತ ಹೇಳಿಕೆಗಳನ್ನು ಪಿ.ಡಬ್ಲ್ಯೂ-2 ಮತ್ತು ಪಿ.ಡಬ್ಲ್ಯೂ-3 ಎಂದು ದಾಖಲಿಸಿಕೊಂಡಿದ್ದಾಳೆ.

6. ಪಿರ್ಯಾದುದಾರನ ಪರ ಶ್ರೀ ಕೆ.ಜೆ. ಧರ್ಮಪ್ಪ, ವಕೀಲರು ತಮ್ಮ ಲಿಖಿತ ವಾದವನ್ನು ಸಲ್ಲಿಸಿದ್ದಾರೆ. ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ.

ಮುಂದುವರಿದಿದೆ......

7. ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸುವುದು ಅವಶ್ಯ ಎಂದು ಕಂಡುಬರುತ್ತದೆ.

1. ಪಿರ್ಯಾದಿದಾರಳು, 1ನೇ ಆರೋಪಿತನು 19ನೇ ಆರೋಪಿಳನ್ನು 2ನೇ ವಿವಾಹ ಮಾಡಿಕೊಂಡಿದ್ದಾನೆಂದು, ಅವರ ವಿರುದ್ಧ ಸಮನ್ಸ್ ಜಾರಿ ಮಾಡಲು ಮೇಲ್ನೊಟಕ್ಕೆ ಸಾಕಷ್ಟು ಕಾರಣಗಳಿವೆಯೇ ಎಂಬುದನ್ನು ರುಜುವಾತುಪಡಿಸುತ್ತಾಳೆಯೇ?

2. ಯಾವ ಆದೇಶ ?

8. ಮೇಲ್ಕಂಡ ಅಂಶಗಳಿಗೆ ನನ್ನ ನಿರ್ಣಯಗಳು ಈ ಕೆಳಕಂಡಂತಿವೆ :

ಅಂಶ-1 : ಭಾಗಶಃ ಸಕಾರಾತ್ಮಕವಾಗಿ
ಅಂಶ-2 : ಅಂತಿಮ ಆದೇಶದ ಪ್ರಕಾರ
ಈ ಕೆಳಕಂಡ ಕಾರಣಗಳಿಗಾಗಿ

**:- ಕಾರಣಗಳು :-**

9. **ಅಂಶ-1 :-** ಪಿರ್ಯಾದಿದಾರಳ ನಿರ್ಧಿಷ್ಟ ಪ್ರಕರಣವೇನೆಂದರೆ, ಪಿರ್ಯಾದಿದಾರಳನ್ನು 1ನೇ ಆರೋಪಿತನು ಸುಮಾರು 10 ವರ್ಷಗಳ ಹಿಂದೆ ಪಿರ್ಯಾದಿದಾರಳ ತವರೂರಾದ ನಲ್ಲೂರು ಗ್ರಾಮದಲ್ಲಿ ತಮ್ಮ ಕುಲಪದ್ಧತಿಯಂತೆ ಹಾಗೂ ಹಿಂದೂ ಸಂಪ್ರದಾಯದಂತೆ ವಿವಾಹ ಮಾಡಿಕೊಂಡಿದ್ದಾನೆ. ಪಿರ್ಯಾದಿದಾರಳು 1ನೇ ಆರೋಪಿತನನ್ನು ಕಾನೂನುಬದ್ಧ ಧರ್ಮಜ ಪತ್ನಿಯಾಗಿದ್ದಾಳೆ. ಪಿರ್ಯಾದಿದಾರಳನ್ನು 1ನೇ ಆರೋಪಿತನು ವಿವಾಹವಾದ ನಂತರ ನಲ್ಲೂರು ಗ್ರಾಮದಲ್ಲಿಯೂ ಹಾಗೂ 1ನೇ ಆರೋಪಿತನ ಊರಾದ ದಬ್ಬೇಘಟ್ಟ ಗ್ರಾಮದಲ್ಲಿ ನಮ್ಮತೆಯಿಂದ ವೈವಾಹಿಕ ದಾಂಪತ್ಯ ಜೀವನವನ್ನು ನಡೆಸಿಕೊಂಡು ಈ ಸಂಬಂಧ ಅವರಿಗೆ ಒಂದು ಹೆಣ್ಣು ಮಗು ಮತ್ತು ಮಗ ಜನಿಸಿದ್ದಾರೆ. 1ನೇ ಆರೋಪಿತನು ಪಿರ್ಯಾದಿದಾರಳನ್ನು ವಿವಾಹವಾದ ಕಾಲದಿಂದಲೂ ಪ್ರತಿದಿನವೂ ಮದ್ಯಪಾನ ಮಾಡಿಕೊಂಡು ಬಂದು ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ಕಿರುಕುಳ ನೀಡುವುದು, ಜೂಜಾಡುವುದು ಹಾಗೂ ಪರ ಹೆಂಗಸರ

ಮುಂದುವರಿದಿದೆ......

ಸಹವಾಸ ಮಾಡುತ್ತಾ ಅವರ ಕುಟುಂಬಕ್ಕೆ ಬರುತ್ತಿದ್ದ ಆದಾಯವನ್ನು ವ್ಯಯ ಮಾಡುತ್ತಾ ಬಂದು ಪಿರ್ಯಾದಿದಾರಳಿಗೆ ಹೆಚ್ಚಿನ ವರದಕ್ಷಿಣೆಯನ್ನು ತರುವಂತೆ ಕಿರುಕುಳ ನೀಡಿ ಮನೆಯಿಂದ ಹೊರ ಹಾಕಿದ್ದಾನೆ. ಪಿರ್ಯಾದಿದಾರಳು ತನ್ನ ತವರು ಮನೆಯಲ್ಲಿ ವಾಸವಾಗಿದ್ದಾಳೆ ಮತ್ತು 1ನೇ ಆರೋಪಿ ವಿರುದ್ದ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಾಳೆ. ದಿನಾಂಕ 07-08-2006 ರ ಸೋಮವಾರ 9.30 ರಿಂದ 10.50 ರೊಳಗೆ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ, ಶ್ರೀ. ಆದಿಚುಂಚನಗಿರಿ ಬೆಟ್ಟದಲ್ಲಿ 1ನೇ ಆರೋಪಿ 19 ನೇ ಆರೋಪಿ ಚಂದ್ರಕಲಾಳೊಂದಿಗೆ 2ನೇ ವಿವಾಹ ಮಾಡಿಕೊಂಡಿರುತ್ತಾನೆ. ಉಳಿದೆಲ್ಲಾ ಆರೋಪಿತರು ಕುಮ್ಮಕ್ಕು ನೀಡಿ ಸದರಿ ವಿವಾಹಕ್ಕೆ ಸಹಕರಿಸಿದ್ದಾರೆ. 1ನೇ ಮತ್ತು 19 ನೇ ಆರೋಪಿ ಚಂದ್ರಕಲಾಳನ್ನು ವಿವಾಹವಾಗಿರುವುದು ಕಾನೂನು ಬಾಹಿರವಾಗಿರುತ್ತದೆ.

10. ಈ ವಿವಾಹವನ್ನು ನಲ್ಲೂರು ಗ್ರಾಮದ ರಾಮೇಗೌಡರ ಮಗ ಮೂರ್ತಿ ಮತ್ತು ತಿರುಮಲೇಗೌಡರ ಮಗ ಮಹೇಶ ಇವರುಗಳು ನೋಡಿದ್ದು, ಸದರಿ ಆದಿಚುಂಚನಗಿರಿ ಬೆಟ್ಟದಲ್ಲಿ ಗಂಗಾಧರೇಶ್ವರ ದೇವಸ್ಥಾನ ಬೆಟ್ಟಕ್ಕೆ ಹೋದಾಗ ನೋಡಿದ್ದೇನೆ. ಅವರು ಸದರಿ ವಿವಾಹವಾಗುತ್ತಿರುವುದನ್ನು ನೋಡಿ ಹಾಗೂ ಆರೋಪಿತರೆಲ್ಲರುಗಳನ್ನು ನೋಡಿ ಆಶ್ಚರ್ಯಗೊಂಡು ನಮ್ಮೂರಿನ ಹುಡುಗಿ ಸರಸ್ವತಿಯನ್ನು ಮೊದಲೇ ವಿವಾಹ ಮಾಡಿಕೊಂಡಿದ್ದು, ಅವರಿಗೆ 2 ಜನ ಮಕ್ಕಳಿದ್ದರೂ ಸಹ ಈ ರೀತಿ ವಿವಾಹ ಮಾಡುತ್ತಿದ್ದೀರೆಂದು ಕೇಳಿದ್ದಕ್ಕೆ ಆರೋಪಿತರೆಲ್ಲರೂ ಸದರಿ ಮೂರ್ತಿ ಮತ್ತು ಮಹೇಶ್‌ರವರನ್ನು ಅವಾಚ್ಯ ಶಬ್ದಗಳಿಂದ ಬೈದು ನಮಗಿಷ್ಟ ಬಂದಂತೆ ಮದುವೆ ಮಾಡಿಕೊಳ್ಳುತ್ತೇವೆ. ನೀವ್ಯಾರು ಕೇಳಲು? ಎಂದು ಬೈದು ಕಳುಹಿಸಿರುತ್ತಾರೆ. 1ನೇ ಆರೋಪಿಯಾದ ರಂಗಸ್ವಾಮಿಯು 19ನೇ ಆರೋಪಿತಳಾದ ಚಂದ್ರಕಲಾಳನ್ನು ಮದುವೆಯಾಗಿರುವುದನ್ನು ನಾವು ಪ್ರತ್ಯಕ್ಷವಾಗಿ ನೋಡಿರುತ್ತಾರೆ.

ಮುಂದುವರಿದಿದೆ……

11. 1ನೇ ಆರೋಪಿತನು 19ನೇ ಆರೋಪಿತಳಾದ ಚಂದ್ರಕಲಾಳನ್ನು 2ನೇ ವಿವಾಹವಾಗುವಾಗ ಜ್ಯೋಯಿಸರೊಬ್ಬರು ಗುಂಡು ಮತ್ತು ಹೆಣ್ಣಿನ ಮಧ್ಯೆ ಬಿಳಿ ಬಟ್ಟೆಯಿಂದ ತೆರೆಯನ್ನು ಕಟ್ಟಿ ನಿಲ್ಲಿಸಿದ್ದರು. ಅಲ್ಲಿಯೇ ದೇವಸ್ಥಾನದ ಪೂಜಾರಿಯು ಒಂದು ತಟ್ಟೆಯಲ್ಲಿ ಬೆಲ್ಲದ ಅಚ್ಚುಗಳನ್ನು, ತೆಂಗಿನ ಕಾಯಿ, ಅಕ್ಕಿ, ವೀಳ್ಯದೆಲೆ ಮತ್ತು ಬಾಳೆ ಹಣ್ಣನ್ನು ಇಟ್ಟು ಅದರ ಮೇಲೊಂದು ತಾಳಿ ಇಟ್ಟು ಪೂಜೆ ಮಾಡಿ ವಾಪಸ್ ಜ್ಯೋಯಿಸರ ಕೈನಲ್ಲಿ ಕೊಟ್ಟರು. ಅಲ್ಲಿಯೇ ಇದ್ದ ಎಲ್ಲಾ ಆರೋಪಿಗಳು ಸದರಿ ತಾಳಿಯನ್ನು ಮುಟ್ಟಿ ಆಶೀರ್ವಾದ ಮಾಡಿ ನಮಸ್ಕಾರವನ್ನು ಮಾಡಿರುತ್ತಾರೆ. ಆನಂತರ ಜ್ಯೋಯಿಸರು ಮಂತ್ರವನ್ನು ಪಠಿಸುತ್ತಾ ತೆರೆಯನ್ನು ತೆಗೆಸಿ 1ನೇ ಆರೋಪಿಯಿಂದ 19ನೇ ಆರೋಪಿಗೆ ಹೂಮಾಲೆಯನ್ನು ಹಾಕಿಸಿರುತ್ತಾರೆ. ಜ್ಯೋಯಿಸರು 1ನೆ ಆರೋಪಿತನಿಗೆ, 19ನೇ ಆರೋಪಿತಳಿಗೆ ತೆಂಗಿನ ಕಾಯಿ, ವೀಳ್ಯದೆಲೆ, ಬಾಳೆ ಹಣ್ಣುಗಳನ್ನು ಇಟ್ಟು ಉಳಿದೆಲ್ಲಾ ಆರೋಪಿಗಳಿಂದ ತೆಂಗಿನ ಕಾಯಿಯ ಮೇಲೆ ಹಾಲು ತುಪ್ಪ ಬಿಟ್ಟು ಧಾರೆ ಎರೆದಿರುತ್ತಾರೆ. ಬೆಳಿಗ್ಗೆ 9.30 ಗಂಟೆಯಿಂದ 10.30 ರ ಸಮಯದಲ್ಲಿ ಧಾರೆಯನ್ನು ಎರೆದು, 1ನೇ ಆರೋಪಿತನು 19ನೇ ಆರೋಪಿತಳಿಗೆ ಜ್ಯೋಯಿಸರು ಜೋರಾಗಿ ಮಂತ್ರ ಹೇಳಿ ತಾಳಿಯನ್ನು ಕಟ್ಟಿಸಿರುತ್ತಾರೆ. ಆಗ 1ನೇ ಆರೋಪಿತನು 19ನೇ ಆರೋಪಿತಳನ್ನು 2ನೇ ಹೆಂಡತಿಯಾಗಿ ತಾಳಿ ಕಟ್ಟಿರುವುದನ್ನು ಮೂರ್ತಿ ಮತ್ತು ಮಹೇಶ ಖುದ್ದಾಗಿ ನೋಡಿದ್ದು, ಪ್ರತಿಭಟಿಸಿ ಕೇಳಿದ್ದಕ್ಕೆ ಎಲ್ಲಾ ಆರೋಪಿಗಳು ನೀವು ಅಪ್ಪಿ ತಪ್ಪಿ ದೇವಸ್ಥಾನದ ಪೂಜೆಗೆ ಬಂದಿದ್ದೀರಿ. ಸುಮ್ಮನೆ ನೀವು ಪೂಜೆ ಮಾಡಿಸಿಕೊಂಡು ಬಂದ ದಾರಿಯಲ್ಲಿ ನೇರವಾಗಿ ಹೋಗಿ. ಇಲ್ಲವಾದರೆ ನಿಮ್ಮನ್ನು ಈ ಬೆಟ್ಟದಿಂದ ಕೆಳಗ ಎಸೆದು ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆಂಬ ವಿಚಾರವನ್ನು ನಮಗೆ ತಿಳಿಸಿರುತ್ತಾರೆ. ಕಾರಣ ಆರೋಪಿತರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಪಿರ್ಯಾದಿದಾರಳು ಈ ಖಾಸಗಿ ದೂರನ್ನು ಸಲ್ಲಿಸಿದ್ದಾಳೆ.

ಮುಂದುವರಿದಿದೆ……

12. ಪಿರ್ಯಾದಿದಾರಳು ಅಪಾದಿಸಿದಂತೆ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಲು ಎನ್ನುವುದು ಮೇಲ್ನೋಟಕ್ಕೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವುದು ಫಿರ್ಯಾದುದಾರಳ ಹೊಣೆಗಾರಿಕೆಯಾಗಿದೆ.

13. ಫಿರ್ಯಾದುದಾರ ಮತ್ತು ಆಕೆಯ ಸಾಕ್ಷಿದಾರರಾದ ಮಹೇಶ ಮತ್ತು ಮೂರ್ತಿ ತಮ್ಮ ಪ್ರಮಾಣೀಕೃತ ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ಯಾವ ರೀತಿ ನೀಡಿದ್ದಾರೆ ಎಂಬುದನ್ನು ಪರಿಶೀಲಿಸಬೇಕಾಗಿದೆ.

14. ಫಿರ್ಯಾದುದಾರಳು ತನ್ನ ಪ್ರಮಾಣೀಕೃತ ಹೇಳಿಕೆಯಲ್ಲಿ 1ನೇ ಆರೋಪಿ ನನ್ನ ಗಂಡ, 2ನೇ ಆರೋಪಿ ನನ್ನ ಮಾವ, 3 ರಿಂದ 21 ನೇ ಆರೋಪಿಗಳು ನನಗೆ ಪರಿಚಯಸ್ಥರು ಹಾಗೂ ಸಂಬಂಧಿಕರಾಗಿರುತ್ತಾರೆ ಎಂದು ಹೇಳಿದ್ದಾಳೆ. ತನ್ನ ಗಂಡ 19 ನೇ ಆರೋಪಿ ಚಂದ್ರಕಲಾ ಎಂಬುವವಳೊಂದಿಗೆ ಆದಿಚುಂಚನಗಿರಿ ಬೆಟ್ಟದಲ್ಲಿ ದಿನಾಂಕ 07-08-2006 ರಂದು 2ನೇ ವಿವಾಹವನ್ನು ಮಾಡಿಕೊಂಡಿದ್ದಾನೆ. ಸದರಿ ವಿವಾಹವನ್ನು ನನ್ನ ಅಥ ಮಹೇಶ ಹಾಗೂ ಮಂಜು ಎನ್ನುವವರು ಸದರಿ ಮದುವೆಯನ್ನು ದೇವಸ್ಥಾನಕ್ಕೆ ಹೋದಾಗ ನೋಡಿರುತ್ತಾರೆ. ತದನಂತರ ತನಗೆ ಆ ವಿಷಯವನ್ನು ತಿಳಿಸಿದ್ದಾರೆ. ಆ ಬಗ್ಗೆ ಕೇಳಲು ಹೋದಾಗ ತಮಗೆ ಕೋಲು ಮತ್ತು ಮಚ್ಚುಗಳನ್ನು ತೆಗೆದುಕೊಂಡು ಬಂದು ಹೊಡೆಯಲು ಬಂದಿದ್ದರು. 1ನೇ ಆರೋಪಿ 19 ನೇ ಆರೋಪಿ ಚಂದ್ರಕಲಾಳೊಂದಿಗೆ 2ನೇ ವಿವಾಹ ಮಾಡಿಕೊಂಡಿದ್ದು ಉಳಿದೆಲ್ಲಾ ಆರೋಪಿತರು ಕುಮ್ಮಕ್ಕು ನೀಡಿ 2ನೇ ಮದುವೆಗೆ ಪ್ರಚೋದನೆಯನ್ನು ನೀಡಿರುತ್ತಾರೆ ಎಂದು ಹೇಳಿಕೆ ಕೊಟ್ಟಿದ್ದಾಳೆ.

ಮುಂದುವರಿದಿದೆ......

15. ಈ ಪ್ರಕರಣದಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೇನೆಂದರೆ, ಪಿರ್ಯಾದಿದಾರಳಾದ ಸರಸ್ವತಿಯು 1ನೇ ಆರೋಪಿತನು 19ನೇ ಆರೋಪಿ ಚಂದ್ರಿಕಳೊಂದಿಗೆ 2ನೇ ವಿವಾಹವನ್ನು ಮಾಡಿಕೊಂಡಿದ್ದನ್ನು ಪ್ರತ್ಯಕ್ಯವಾಗಿ ನೋಡಿದ ಸಾಕ್ಷಿದಾರಳಲ್ಲ. ಅವಳು ಸಾಕ್ಷಿದಾರರಾದ ಮೂರ್ತಿ ಮತ್ತು ಮಹೇಶರವರ ಹೇಳಿಕೆಗಳ ಆಧಾರದ ಮೇಲೆ 1ನೇ ಆರೋಪಿತನು ತನ್ನ ಜೀವಿತ ಅವಧಿಯಲ್ಲಿ 19 ನೇ ಆರೋಪಿ ಚಂದ್ರಕಲಾಳೊಂದಿಗೆ ಮದುವೆ ಮಾಡಿಕೊಂಡಿದ್ದಾನೆ ಅಂತಾ ತನ್ನ ಪ್ರಮಾಣೀಕೃತ ಹೇಳಿಕೆ ನೀಡಿದ್ದಾಳೆ. ಅವಳ ಖಾಸಗಿ ದೂರಿಗೆ ಮತ್ತು ಪ್ರಮಾಣೀಕೃತ ಹೇಳಿಕೆಗೆ ಪೂರಕವಾದ ಯಾವ ಯಾವ ಸಾಕ್ಷಾಧಾರಗಳನ್ನು ನ್ಯಾಯಾಲಯದ ಮುಂದೆ ಪಿರ್ಯಾದಿದಾರಳು ಒದಗಿಸಿದ್ದಾಳೆ ಎಂಬುದನ್ನು ಪರಿಶೀಲಿಸಬೇಕಾಗಿದೆ.

16. ಪಿರ್ಯಾದಿ ಪರ ಸಾಕ್ಷ್ಯ ಪಿಡಬ್ಲ್ಯೂ-2 ಮಹೇಶ್ ತನ್ನ ಪ್ರಮಾಣೀಕೃತ ಹೇಳಿಕೆ ನೀಡಿದ್ದು, 1ನೇ ಆರೋಪಿ ಮತ್ತು 19ನೇ ಆರೋಪಿ ಚಂದ್ರಕಲಾಳನ್ನು ಮದುವೆಯಾಗುತ್ತಿದ್ದುದನ್ನು ನೋಡಿದ್ದು, ಕೇಳಲು ಹೋದಾಗ ಅವಾಚ್ಯ ಶಬ್ದದಿಂದ ಬೈದು, ಆರೋಪಿಯ ತನ್ನನ್ನು ಬೆಟ್ಟದಿಂದ ತಳ್ಳಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾನೆ ಎಂದು ಹೇಳಿಕೆಯನ್ನು ನೀಡಿದ್ದಾನೆ.

17. ಪಿರ್ಯಾದಿ ಪರ ಸಾಕ್ಷ್ಯ ಪಿಡಬ್ಲ್ಯೂ-3 ಮೂರ್ತಿ ತನ್ನ ಪ್ರಮಾಣೀಕೃತ ಹೇಳಿಕೆಯಲ್ಲಿ 2006 ರಲ್ಲಿ ತಾನು ಚುಂಚುನಗಿರಿ ಬೆಟ್ಟಕ್ಕೆಂದು ಹೋದಾಗ 1ನೇ ಆರೋಪಿ ಮತ್ತು 19ನೇ ಆರೋಪಿ ಚಂದ್ರಕಲಾಳನ್ನು ಮದುವೆಯಾಗುತ್ತಿರುವುದನ್ನು ನೋಡಿರುವುದಾಗಿ ಹೇಳಿದ್ದಾನೆ. ವಿಚಾರಿಸಲಾಗಿ ಆರೋಪಿ ತನ್ನ ಮೇಲೆ ಹಲ್ಲೆಗೆ ಪ್ರಯತ್ನಿಸಿದ್ದಾನೆ ಎಂದು ಹೇಳಿಕೆಯನ್ನು ನೀಡಿದ್ದಾನೆ. ಈ ಇಬ್ಬರ ಹೇಳಿಕೆಯ ಆಧಾರದ ಮೇಲೆ ಪಿರ್ಯಾದಿದಾರಳು ಈ ಖಾಸಗಿ ದೂರು ನೀಡಿದ್ದಾಳೆ ಅಂತಾ ಈ ಮೇಲೆ ಉಲ್ಲೇಖ ಪಡಿಸಿದ್ದೇನೆ.

ಮುಂದುವರಿದಿದೆ……

18. ಪಿಡಬ್ಲೂ-3 ಮೂರ್ತಿ ಇವರ ಪ್ರಮಾಣೀಕೃತ ಹೇಳಿಕೆಯನ್ನು ಪರಿಶೀಲಿಸಿದಾಗ, 2 ರಿಂದ 18 ಆರೋಪಿತರು ಮತ್ತು 20 ಹಾಗೂ 21 ನೇ ಆರೋಪಿತರು ವಿವಾಹದಲ್ಲಿ ಭಾಗಿಯಾಗಿದ್ದು, ಸದರಿ ಆರೋಪಿತರೆಲ್ಲರೂ 1ನೇ ಆರೋಪಿಯು 2ನೇ ವಿವಾಹವನ್ನು ಮಾಡಿಕೊಳ್ಳುವಲ್ಲಿ ಯಾವ ರೀತಿ ಸಹಕರಿಸಿದ್ದಾರೆ ಎಂಬುದನ್ನು ತಮ್ಮ ನ್ಯಾಯಾಲಯದಲ್ಲಿ ನೀಡಿರುವ ಪ್ರಮಾಣೀಕೃತವಾಗಿ ಹೇಳಿಲ್ಲ. ಇವರಿಬ್ಬರ ಸಾಕ್ಷಿದಾರರ ಪ್ರಮಾಣೀಕೃತ ಹೇಳಿಕೆಗಳು, ಪಿರ್ಯಾದಿ ಸಲ್ಲಿಸಿರುವ ಖಾಸಗಿ ದೂರಿನಲ್ಲಿ ಹೇಳಿಕೊಂಡಿರುವ ಸಂಗತಿಗಳಿಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗುವುದಿಲ್ಲ. ಸದರಿ ಮದುವೆಯನ್ನು ಪ್ರತ್ಯಕ್ಷವಾಗಿ ನೋಡಿರುವ ಸಾಕ್ಷಿದಾರರಾದ ಮಹೇಶ ಮತ್ತು ಮೂರ್ತಿ ಇವರ ಪ್ರಮಾಣೀಕೃತ ಹೇಳಿಕೆಯಿಂದ ಆರೋಪಿ ನಂ.2 ರಿಂದ 18 ಮತ್ತು 20 ಹಾಗೂ 21 ರವರು ಮತ್ತು 1ನೇ ಆರೋಪಿತನು 19ನೇ ಆರೋಪಿತಳನ್ನು ವಿವಾಹ ಮಾಡಿಕೊಳ್ಳಲು ದುಷ್ಪ್ರೇರಣೆ ನೀಡಿದ್ದಾರೆ ಎಂದು ನಾನು ಅಭಿಪ್ರಾಯಪಡಲು ಯಾವುದೇ ಸಾಕ್ಷ್ಯ ಮೇಲ್ನೋಟಕ್ಕೆ ಕಂಡುಬಂದಿಲ್ಲ. ಆದರೆ 1ನೇ ಆರೋಪಿ ರಂಗಸ್ವಾಮಿ ತನ್ನ ಜೀವಿತ ಅವಧಿಯಲ್ಲಿ 19 ನೇ ಆರೋಪಿ ಜೊತೆ ವಿವಾಹವಾಗಿದ್ದಾರೆ ಎಂಬುದನ್ನು ಈ ಹಂತದಲ್ಲಿ ನಂಬಲು ಮೇಲ್ನೊಟಕ್ಕೆ ಸಾಕಷ್ಟು ಕಾರಣಗಳು ಕಂಡುಬಂದಿರುತ್ತವೆ. ಕಾರಣ 1 ಮತ್ತು 19ನೇ ಆರೋಪಿಗಳಿಗೆ ಸಮನ್ಸ್ ಜಾರಿ ಮಾಡಲು ಸಾಕಷ್ಟು ಕಾರಣಗಳಿವೆ ಎಂದು ಅಭಿಪ್ರಾಯಪಟ್ಟು **1**ನೇ ಅಂಶವನ್ನು **ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

19. **ಅಂಶ-2** :- ಈ ಮೇಲಿನ ಚರ್ಚೆಯಿಂದ ಈ ಕೆಳಕಂಡ ಆದೇಶವನ್ನು ಮಾಡಿದ್ದೇನೆ.

ಮುಂದುವರಿದಿದೆ......

## -ಃ ಆದೇಶ ಃ-

***1 ಮತ್ತು 19 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 494 ರ ಅಡಿ ಪ್ರಕರಣ ದಾಖಲಿಸಿಕೊಂಡು ಸಮನ್ಸ್ ಜಾರಿ ಮಾಡಲು ಆದೇಶಿಸಲಾಗಿದೆ.***

***ಪಿರ್ಯಾದಿದಾರಳು 1 ಮತ್ತು 19 ನೇ ಆರೋಪಿತರ ವಿರುದ್ಧ ಸಮನ್ಸ್ ಜಾರಿಗೊಳಿಸಲು ಅವಶ್ಯಕವಿರುವ ಪ್ರೊಸೆಸ್ ನೀಡತಕ್ಕದ್ದು.***

***ದಿನಾಂಕ 03-11-2014 ರಂದು ಕರೆಯುವುದು.***

***(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ಕೊಟ್ಟು, ಆಕೆ ಬೆರಳಚ್ಚು ಮಾಡಿದ ನಂತರ ತಪ್ಪಿದ್ದಲ್ಲಿ ತಿದ್ದಿ ಇವತ್ತು ದಿನಾಂಕ 14 ನೇ ಆಗಸ್ಟ್ 2014 ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)***

**(ವೆಂಕಣ್ಣ ಬಸಪ್ಪ ಹೊಸಮನಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

## -ಃ ಅನುಬಂಧ ಃ-

1. ಪಿರ್ಯಾದುದಾರರ ಪರ ಪರೀಕ್ಷಿಸಿದ ಸಾಕ್ಷಿಗಳು ಃ-

| | | |
|---|---|---|
| ಪಿಡಬ್ಲ್ಯೂ-1 | ಃ | ಸರಸ್ವತಿ |
| ಪಿಡಬ್ಲ್ಯೂ-2 | ಃ | ಮಹೇಶ |
| ಪಿಡಬ್ಲ್ಯೂ-3 | ಃ | ಮೂರ್ತಿ |

**(ವೆಂಕಣ್ಣ ಬಸಪ್ಪ ಹೊಸಮನಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು8
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

*SMP*

ಮುಂದುವರಿದಿದೆ......